*M.A./30/2022*
*P.W-2*

(ಸಾಕ್ಷಿಯನ್ನು ದಿನಾಂಕ: 13.02.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀಮತಿ ಜೆ.ಹೆಚ್., ಮೇಲ್ಮನವಿದಾರರ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ಅಂಶಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಇದನ್ನು ನಾನೇ ಹೇಳಿ ಬರೆಯಿಸಿ ನನ್ನ ಸಹಿಯನ್ನು ಮಾಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಸಿ.ಜಿ., ಎದುರುದಾರರ ಪರ ವಕೀಲರಿಂದಃ**

ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಮೂಲ ದಾವೆ ಸಂಖ್ಯೆ 426/2020 ದಾವೆಯ ಪ್ರತಿ ಮುದ್ದತಿನಲ್ಲಿಯೂ ನಾನು ಮತ್ತು ನನ್ನ ಸಹೋದರರು ಬರುತ್ತಿದ್ದೆವು ಎಂದರೆ ಕೆಲವೊಮ್ಮೆ ಬರುತ್ತಿದ್ದೆವು ಕೆಲವೊಮ್ಮೆ ಬರುತ್ತಿರಲಿಲ್ಲ ಎಂದು ನುಡಿಯುತ್ತೇನೆ. ಸದರಿ ದಾವೆಯ ಮಧ್ಯಂತರ ಅರ್ಜಿ-1 ರಲ್ಲಿ ವಾದ-ವಿವಾದಗಳು ನ್ಯಾಯಾಲಯದಲ್ಲಿ ಆಗುತ್ತಿದ್ದ ಸಮಯದಲ್ಲಿ ನಾನು ಮತ್ತು ನನ್ನ ಸಹೋದರರು ನ್ಯಾಯಾಲಯದಲ್ಲಿ ಹಾಜರಿದ್ದೆವು ಎಂದರೆ ನನ್ನ ಅಣ್ಣ ಬಷೀರ್ ಅಹಮ್ಮದ್ ಬರುತ್ತಿದ್ದರು ಎಂದು ನುಡಿಯುತ್ತೇನೆ. ಎಲ್ಲಾ ಮೇಲ್ಮನವಿದಾರರು ಮೂಲ ದಾವೆ ಸಂಖ್ಯೆ 426/2020 ದಾವೆಯ ಪ್ರತಿ ಮುದ್ದತಿಗೂ ನ್ಯಾಯಾಲಯದಲ್ಲಿ ಹಾಜರಾಗುತ್ತಿದ್ದರೂ ಕೆಲವೊಮ್ಮೆ ಮಾತ್ರ ಹಾಜರಾಗುತ್ತಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾವು ಸಲ್ಲಿಸಿದ ಮಧ್ಯಂತರ ಅರ್ಜಿ ದಿನಾಂಕಃ 01.02.2022 ರಂದು ವಜಾಗೊಂಡಿರುತ್ತದೆ ಎಂದರೆ ನಮಗೆ ಆ ಬಗ್ಗೆ ತಿಳುವಳಿಕೆ ಇರಲಿಲ್ಲ ಎಂದು ನುಡಿಯುತ್ತೇನೆ. ಸದರಿ ಮಧ್ಯಂತರ ಅರ್ಜಿ ವಜಾಗೊಂಡ ನಂತರ 1 ನೇ ಎದುರುದಾರರ

ಸೊಸೆ ನೂರ್ ಆಸಿಯಾರವರು ಮೇಲ್ಮನವಿದಾರರ ವಿರುದ್ಧ ಮೂಲ ದಾವೆ ಸಂಖ್ಯೆ 579/2021 ರಂತೆ ದಾಖಲಿಸಿದ ದಾವೆಯನ್ನು ಅಡ್ವಾನ್ಸ್ ಮಾಡಿ ಸದರಿ ದಾವೆಯಲ್ಲಿ ವಾದ ಮಂಡಿಸಲಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಮೂಲ ದಾವೆ ಸಂಖ್ಯೆ 579/2021 ರಲ್ಲಿ ನಾನು ಮತ್ತು ನನ್ನ ಸಹೋದರರು ನ್ಯಾಯಾಲಯದಲ್ಲಿ ಹಾಜರಿದ್ದು, ನಮ್ಮ ವಕೀಲರು ಸದರಿ ದಾವೆಯಲ್ಲಿಯೂ ವಾದ ಮಂಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೂಲ ದಾವೆ ಸಂಖ್ಯೆ 579/2021 ರಲ್ಲಿ ಮಧ್ಯಂತರ ಅರ್ಜಿಯ ನೂರ್ ಆಸೀಯಾರವರ ಪರ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿ ನೂರ್ ಆಸೀಯಾರವರ ಪರ ತೀರ್ಮಾನವಾಗಿರುತ್ತದೆ ಎಂದು ನನಗೆ ಗೊತ್ತಿದ್ದರೂ ಸಹ ಗೊತ್ತಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಎದುರುದಾರರಾದ ಗೌಸ್ ಪೀರ್ ರವರು ಖರೀಮ್ ಪೀರ್ ರವರ ವಿರುದ್ಧ ಅಸಲು ದಾವೆ ಸಂಖ್ಯೆ 103/2022 ರಂತೆ ಭಾಗಾಂಶ ಕೋರಿ ದಾವೆ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಹಾಗೂ ಇತರರು ಸಿ.ಪಿ.ಸಿ ಕ್ರಮಾದೇಶ 1 ನಿಯಮ 10 ರಂತೆ ದಿನಾಂಕಃ 23.05.2022 ರಂದು ಅರ್ಜಿ ಸಲ್ಲಿಸಿ ಸೇರ್ಪಡೆಗೊಂಡಿರುತ್ತೇವೆ ಎಂದರೆ ಸರಿ.

ಜಾಂಡೀಸ್ ಖಾಯಿಲೆಗೆ ನಾನು ಎಲ್ಲಿ ಯಾರ ಬಳಿ ಚಿಕಿತ್ಸೆ ಪಡೆದಿದ್ದೇನೆ ಎಂದರೆ ನಾನು ಆರ್ಯುವೇದ ಚಿಕಿತ್ಸೆ ಪಡೆದಿರುತ್ತೇನೆ ಎಂದು ನುಡಿಯುತ್ತೇನೆ. ಯಾರ ಬಳಿ ಚಿಕಿತ್ಸೆ ಪಡೆದಿರುತ್ತೇನೆ ಎಂದು ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿ ಸ್ವತಹ ಮುಂದುವರೆದು ಮೈಸೂರಿನಲ್ಲಿ ಸಂಬಂಧಿಯೊಬ್ಬರು ನನ್ನನ್ನು ಚಿಕಿತ್ಸೆಗೆ ಕರೆದುಕೊಂಡು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ನನಗೆ ಜಾಂಡೀಸ್ ಖಾಯಿಲೆಯಾದ ಬಗ್ಗೆ ನ್ಯಾಯಾಲಯದಲ್ಲಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನಗೆ ಮತ್ತು 1 ನೇ ಮೇಲ್ಮನವಿದಾರರಿಗೆ ಒಟ್ಟಿಗೆ ಜಾಂಡೀಸ್ ಖಾಯಿಲೆ ಬಂದಿರುತ್ತದೆ ಎಂದು ನನ್ನ ಪ್ರಮಾಣ

ಪತ್ರದಲ್ಲಿ ಹೇಳಿರುವುದಿಲ್ಲ. ನನ್ನ ಅಣ್ಣ ಬಷೀರ್ ಅಹಮ್ಮದ್ ರವರಿಗೆ ಜಾಂಡೀಸ್ ಖಾಯಿಲೆ ಆಗಿರುವುದಿಲ್ಲ. ಸಾಕ್ಷಿ ಸ್ವತಹ ಮುಂದುವರೆದು 1 ನೇ ಮೇಲ್ಮನವಿದಾರರು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು ಎಂದು ನುಡಿಯುತ್ತಾರೆ.

ನಾವು ಕಾಲ ವಿಳಂಬವನ್ನು ಮನ್ನಿಸಲು ಸಲ್ಲಿಸಿದ ಪ್ರಸ್ತುತ ಅರ್ಜಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರವನ್ನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.